ಸದಸ್ಯರ ಹೆಸರು: ಶ್ರೀ ಸಿ.ಗುರುಸ್ವಾಮಿ (ಚಾಮರಾಜನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಯವರು)

ಪ್ರಶ್ನೆ

1. ಚಾಮರಾಜನಗರಕ್ಕೆ ಕಾವೇರಿ ನೀರು ಸರಬರಾಜು ಯೋಜನೆ ಪೂರ್ಣಗೊಂಡು ಆರಂಭವಾಗಿದೆಯೇ? ಆರಂಭವಾಗಿದ್ದಲ್ಲಿ ಯಾವಾಗ ಯಾರಿಂದ ವಿದ್ಯುಕ್ತವಾಗಿ ಆರಂಭಗೊಂಡಿದೆ.

2. ಸದರಿ ಯೋಜನೆಗೆ ಮಂಜೂರಾಗಿರುವ ಹಣ ಎಷ್ಟು? ಖರ್ಚಾಗಿರುವ ಹಣ ಎಷ್ಟು? ಈ ಯೋಜನೆಯಡಿಯಲ್ಲಿ ಸಾರ್ವಜನಿಕರಿಗೆ ನೀರು ವಿತರಣಾ ವ್ಯವಸ್ಥೆ ಕಾಮಗಾರಿಗಳೂ ಸೇರಿದೆಯೇ?

ಉತ್ತರ

1. ಚಾಮರಾಜನಗರಕ್ಕೆ ಕಾವೇರಿ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸಿ, 29.12.2000ರಲ್ಲಿ ಚಾಲನೆಗೊಳಿಸಲಾಯಿತು. ದಿನಾಂಕ 12.1.2001ರಿಂದ ಚಾಮರಾಜನಗರಕ್ಕೆ ವಿತರಣಾ ವ್ಯವಸ್ಥೆಯ ಮೂಲಕ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದ್ದು ಈ ಯೋಜನೆ ಪೂರ್ಣಗೊಂಡ ನಂತರ ಯಾರಿಂದಲೂ ವಿದ್ಯುಕ್ತವಾಗಿ ಆರಂಭಗೊಂಡಿರುವುದಿಲ್ಲ.

2. ಸದರಿ ಯೋಜನೆಗೆ ಮಂಜೂರಾಗಿರುವ ಹಣ ರೂ.615.00 ಲಕ್ಷಗಳು ಪರಿಷ್ಕೃತ ಅಂದಾಜು ರೂ.2489.00 ಲಕ್ಷಗಳು ಕಾಮಗಾರಿಗೆ ಡಿಸೆಂಬರ್ 2001ರ ವರೆವಿಗೆ ಖರ್ಚಾಗಿರುವ ಹಣ ರೂ.2337.50 ಲಕ್ಷಗಳು ಈ ಯೋಜನೆಯಲ್ಲಿ ರೂ.28.91 ಲಕ್ಷಗಳನ್ನು ಪಟ್ಟಣದಲ್ಲಿ ಹೆಚ್ಚುವರಿ ವಿತರಣಾ ಜಾಲವನ್ನು ಮತ್ತು ಫೀಡರ್ ಮೇನ್ ಅಳವಡಿಸಲು ವೆಚ್ಚ ಮಾಡಲಾಗಿದೆ. ಈ ವಿತರಣಾ ಜಾಲವನ್ನು ನಗರದ ಹಲವು ಪ್ರದೇಶದಲ್ಲಿ ಕೈಗೊಳ್ಳಲಾಗಿದೆ. ಇತ್ತೀಚೆಗೆ ನಗರದ ವ್ಯಾಪ್ತಿಗೆ ಸೇರಿರುವ ಪ್ರದೇಶಗಳು ಮತ್ತು ಹೊಸ ಬಡಾವಣೆಗಳಿಗೆ ಹಳೆಯ ನಗರದ ಅವಶ್ಯಕತೆ ಇರುವ ವಿತರಣಾ ಜಾಲ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜನ್ನು ತಯಾರಿಸಲಾಗುತ್ತಿದೆ.

ಮಹಾನಗರ ಪಾಲಿಕೆ ವ್ಯಾಪ್ತಿಯ ಹೋಟೆಲುಗಳಲ್ಲಿ ಶೌಚಾಲಯ ವ್ಯವಸ್ಥೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 108(470)

ಸದಸ್ಯರ ಹೆಸರು: ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ)

ಉತ್ತರಿಸುವ ಸಚಿವರು: ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)

ಪ್ರಶ್ನೆ

ಅ) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಹೋಟಲ್:ದರ್ಶಿನಿ ಇತ್ಯಾದಿಗಳಲ್ಲಿ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇರಬೇಕೆಂಬ ನಿಯಮ ಇರುವುದು ನಿಜವೆ?

ಆ) ಈ ರೀತಿ ಶೌಚಾಲಯ ವ್ಯವಸ್ಥೆ ಇಲ್ಲದಿರುವ ಹೋಟಲುಗಳನ್ನು ಮಹಾನಗರ ಪಾಲಿಕೆ ಗುರುತಿಸಿದೆಯೇ, ಹಾಗಿದ್ದಲ್ಲಿ ಎಷ್ಟರ ನೀಡುವುದು?

ಇ) ಶೌಚಾಲಯ ವ್ಯವಸ್ಥೆ ಇಲ್ಲದೇ ಇರುವ ಹೋಟೇಲುಗಳ ಪರವಾನಗಿಯನ್ನು ನವೀಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಉತ್ತರ

ಅ) ಹೌದು.

ಆ ಮತ್ತು ಇ) ಹೌದು. ಆದಾಗ್ಯೂ ಲೈಸನ್ಸ್‌ಗಳನ್ನು ಮುಂದುವರಿಸುವ ಸಮಯದಲ್ಲಿ ಹೋಟಲ್: ದರ್ಶಿನಿಗಳಲ್ಲಿ ಶೌಚಾಲಯ ವ್ಯವಸ್ಥೆ ಮಾಡಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಗುತ್ತಿದೆ.

ಬೆಂಗಳೂರು ಹಳೆಯ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯ ತೊಂದರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 109(474)

ಸದಸ್ಯರ ಹೆಸರು: ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು)

ಪ್ರಶ್ನೆ

1. ಬೆಂಗಳೂರು ನಗರದ ಹಳೆಯ ಪ್ರದೇಶಗಳಾದ ಗಾಂಧಿನಗರ, ಚಿಕ್ಕಪೇಟೆ,